

ಸಿಲುಕಿಕೊಳ್ಳುವುದನ್ನು ಈಗಲೂ ಕಾಣಬಹುದು.

★ ಜನಸಾಮಾನ್ಯರು ಕೂಡ ತಮ್ಮ ಮನೆತನದ ಘನತೆ, ಸಾಮಾಜಿಕ ಸ್ಥಾನಮಾನ, ಜಾತಿ, ಧರ್ಮ, ರೂಪ ಮುಂತಾದ ಮಾನದಂಡಗಳಿಂದ ಮಕ್ಕಳಿಗೆ ಸಂಗಾತಿಯನ್ನು ಹುಡುಕುವುದು ಹಿಂದಿನಿಂದಲೂ ನಡೆದುಬಂದಿದೆ. ಹಾಗೆಯೇ ಇವತ್ತೂ ಅದು ಮುಂದುವರೆದಿದೆ.

ಇದರರ್ಥ ಇಪ್ಪತ್ತನೇ ಶತಮಾನದವರೆಗೆ ಕೂಡ ವಿವಾಹ ಒಪ್ಪಂದವೇ ಆಗಿರುತ್ತಿತ್ತು. ಆದರೆ ಈ ಒಪ್ಪಂದ ಪೋಷಕರ ಮಧ್ಯೆ ಏರ್ಪಡುವಂತಹದ್ದು ಆಗಿತ್ತು. ತಮ್ಮ ನಡುವಿನ ಹಗೆ ಸಾಧಿಸಲು ದಂಪತಿಗಳು ಅನ್ಯೋನ್ಯವಾಗಿದ್ದರೂ ಅವರನ್ನು ಬೇರೆ ಮಾಡಲು ಪೋಷಕರು ಹಿಂಜರಿಯದಿರುವ ಉದಾಹರಣೆಗಳಿವೆ. ಹೀಗೆ ಪೋಷಕರ ಅನುಕೂಲಕ್ಕಾಗಿ ಮಾಡಿದ ಸಂಬಂಧಗಳಿಗೆ ಪ್ರೀತಿ, ಪ್ರೇಮ, ತ್ಯಾಗ, ಹೊಂದಾಣಿಕೆ, ಧಾರ್ಮಿಕ, ಸಾಮಾಜಿಕ ಸಾಂಸ್ಕೃತಿಕ ನಂಬಿಕೆಗಳು ಮುಂತಾದವುಗಳ ಸಕ್ಕರೆಯ ಹೊದಿಕೆ ಹೊದಿಸಲಾಗುತ್ತಿತ್ತು. ಇಪ್ಪತ್ತೊಂದನೆ ಶತಮಾನದ ಯುವಜನತೆ ಈಗ ಪೋಷಕರಿಂದ ಹೇರಲ್ಪಟ್ಟ ಇಂತಹ ಕಟ್ಟುಪಾಡುಗಳನ್ನು ಮೀರಿ ತಮ್ಮತನವನ್ನು ಕಂಡುಕೊಳ್ಳುವ ಹೋರಾಟದಲ್ಲಿದ್ದಾರೆ. ಇದೊಂದು ತಲೆಮಾರುಗಳ ಅಂತರದ ರೂಪ ಪಡೆದುಕೊಂಡಿದೆ.

ಹಾಗಾಗಿ ನಾವೀಗ ಯೋಚಿಸಬೇಕಾಗಿರುವುದು ಮದುವೆಗಳನ್ನು ಪೋಷಕರ ನಡುವಿನ ಒಪ್ಪಂದದ ಬದಲಾಗಿ ಸಂಗಾತಿಗಳ ನಡುವಿನ ಒಪ್ಪಂದವನ್ನಾಗಿ ಮಾರ್ಪಡಿಸುವುದು ಹೇಗೆ ಎನ್ನುವುದನ್ನು ಮಾತ್ರ.

ಎಲ್ಲಾ ವ್ಯಾವಹಾರಿಕ ಒಪ್ಪಂದಗಳಲ್ಲಿ ಎರಡು ಪ್ರಮುಖ ಅಂಶಗಳಿರುತ್ತವೆ.

1. ವ್ಯಾಪಾರ ಅಥವಾ ಉದ್ದಿಮೆಯನ್ನು ನಡೆಸಿಕೊಂಡು ಹೋಗುವುದು ಹೇಗೆ? ಪಾಲುದಾರರ ಜವಾಬ್ದಾರಿ ಮತ್ತು ಕರ್ತವ್ಯಗಳೇನು? ಲಾಭ ನಷ್ಟಗಳ ಹಂಚಿಕೆಯನ್ನು ಹೇಗೆ ಮಾಡಿಕೊಳ್ಳುವುದು ಮುಂತಾದವು.

2. ಭಿನ್ನಾಭಿಪ್ರಾಯಗಳು ಬಂದಾಗ ಅವುಗಳನ್ನು ನಿಭಾಯಿಸುವುದು ಹೇಗೆ? ಅನಿವಾರ್ಯವಾಗಿ ವ್ಯವಹಾರವನ್ನು ನಿಲ್ಲಿಸಬೇಕಾಗಿ ಬಂದಾಗ ಏನೇನು ಮಾಡಬೇಕು? ಮುಂತಾದವು.

ವೈವಾಹಿಕ ಒಪ್ಪಂದಗಳಲ್ಲಿ ಮೇಲಿನ ಅಂಶಗಳನ್ನು ಹೇಗೆ ಬಳಸಬಹುದು ಎಂದು ಯೋಚಿಸೋಣ.

## ಸಂಬಂಧದ ಸ್ಥೂಲ ರೂಪರೇಷೆ

ಕಾಲ ಬದಲಾಗಿದೆ. 50 ವರ್ಷಗಳ ಹಿಂದೆ ಆಗುತ್ತಿದ್ದಂತೆ ಇವತ್ತು ಮದುವೆಯಾಗುವ ಗಂಡುಹೆಣ್ಣುಗಳು ಕೇವಲ ಹೆಣ್ಣು ನೋಡುವ ಸಂಪ್ರದಾಯದ ನಂತರ ನಿರ್ಧಾರಗಳನ್ನು ಮಾಡುವುದಿಲ್ಲ. ಸ್ವಲ್ಪ ಖಾಸಗೀ ಮಾತುಕತೆಗೂ ಅವಕಾಶ ಕಲ್ಪಿಸಿಲಾಗುತ್ತದೆ.

ಆದರೆ ಹೆಚ್ಚೆಂದರೆ ಒಂದು ಗಂಟೆ ನಡೆಯಬಹುದಾದ ಇಂತಹ ಮಾತುಕತೆಗಳಲ್ಲಿ ಸೌಜನ್ಯದ ಪರಿಚಯದ ಸಂಭಾಷಣೆ ಮಾತ್ರ ನಡೆಯುತ್ತದೆ. ವಿದ್ಯಾಭ್ಯಾಸ, ಉದ್ಯೋಗ, ಸಂಬಳ, ಸಾರಿಗೆ, ಸ್ನೇಹಿತರು, ಹವ್ಯಾಸಗಳು– ಹೀಗೆ ಬಹಳ ಔಪಚಾರಿಕವಾದ ಮಾಹಿತಿ ಹಂಚಿಕೆಯಾಗುತ್ತದೆ. ಇದರಲ್ಲಿ ಇಬ್ಬರ ಹೃದಯಕ್ಕೆ ಹತ್ತಿರವಾದ ಅಥವಾ ಭಾವೀ ಜೀವನಕ್ಕೆ ಉಪಯುಕ್ತವಾಗುವ ಅಂಶಗಳಿರುವುದಿಲ್ಲ. ಭಾವೀ ಸಂಗಾತಿಗಳು ಒಪ್ಪಿಗೆ ಸೂಚಿಸಿದ ತಕ್ಷಣ ನಿಶ್ಚಿತಾರ್ಥ ನಡೆದುಹೋಗುತ್ತದೆ. ಮುಂದೆ ಮದುವೆ ನಡೆಯುವವರೆಗೆ ಇಬ್ಬರೂ ಪ್ರೇಮಿಗಳಾಗಿರುತ್ತಾರೆ. ಜವಾಬ್ದಾರಿಗಳಿಲ್ಲದ ಈ ಸಮಯ ಪ್ರೇಮದ ಕನಸುಗಳಿಗೆ ರೆಕ್ಕೆಪುಕ್ಕ ಮೂಡಿಸುತ್ತದೆಯೇ ಹೊರತು ಗಟ್ಟಿಯಾಗಿ ನೆಲದಲ್ಲಿ ಕಾಲೂರಲು ನೆರವಾಗುವುದಿಲ್ಲ.

ಇನ್ನು ಪ್ರೇಮಿಸಿ ಮದುವೆಯಾಗುವವರು ಪ್ರೀತಿಯ ನಶೆಯಲ್ಲಿರುತ್ತಾರೆ. ಈ ನಶೆ ಎಲ್ಲಾ ಭಿನ್ನಾಭಿಪ್ರಾಯಗಳನ್ನೂ ಮರೆಸಿಬಿಡುತ್ತದೆ. ಒಬ್ಬರನ್ನೊಬ್ಬರು ಮೆಚ್ಚಿಸುತ್ತಾ ಮತ್ತು ಒಬ್ಬರ ಮೇಲೊಬ್ಬರು ಪ್ರಭಾವ ಬೀರುತ್ತಾ ಹೆಣೆಯುವ ಸುಂದರ ಕನಸುಗಳು ರೋಮಾಂಚನ ಹುಟ್ಟಿಸುತ್ತದೆ. ಆದರೆ ದೀರ್ಘಕಾಲದ ದಾಂಪತ್ಯಕ್ಕೆ ಬೇಕಾದ ಸಿದ್ಧತೆಗೆ ಸಹಾಯ ಮಾಡುವುದಿಲ್ಲ. ಕೆಲವು ಪ್ರೇಮಿಗಳು ಕೊಂಚ

